ದಿನವೆಲ್ಲಾ ಕಷ್ಟ್‌ಪಟ್ಟು ದುಡೀತೀವಿ ಸಾರ್... ಮೈಯೆಲ್ಲಾ ನುಗ್ಗಾಗೋಗಿರ್ತದೆ. ಅಷ್ಟೋ ಇಷ್ಟೋ ತಗಳ್ಳೇಬೇಕು. ಅದೇ ದೊಡ್ ತಪ್ಪು ಅಂತ ಓಡಾಡೋ ಗಾಡಿನ ಕಿತ್ಕಂಡು ಕಳಿಸ್ತೀರಲ್ಲಾ?... ನಾವೆಲ್ಲಾ ಎಲ್ಲಿಗೋಗ್ಬೇಕು ಸಾ...' ಅಂತ ಇಡೀ ಕುಡುಕ ಸಮುದಾಯದ ಪರವಾಗಿ ದನಿ ಎತ್ತಿದ್ದರು.

ಅವರ ತಕರಾರು ಇದ್ದುದು ನಾವು, ಪೊಲೀಸರು ಉಪಯೋಗಿಸುತ್ತಿದ್ದ ಆಲ್ಕೋಮೀಟರುಗಳ ಬಗ್ಗೆ. ಎಲ್ಲೀ ಅಂದರೆ ಅಲ್ಲಿ ತಡೆದು ನಿಲ್ಲಿಸಿ 'ಮೆಷೀನು' ಬಾಯಿಗಿಟ್ಟು ಕೇಸು ಜಡಿದು ಗಾಡಿ ಸೀಜು ಮಾಡಿ ಮನೆಗೆ ಕಳಿಸುತ್ತಿದ್ದ ನಮ್ಮ ಬಗ್ಗೆ ಅವರಿಗೆ ಅಸಮಾಧಾನವಿತ್ತು. ಸ್ವಚ್ಛಂದವಾಗಿ ಓಲಾಡಿಕೊಂಡು ತಮಗೆ ಬೇಕಾದ ಟೈಮಿಗೆ ಮನೆ ಸೇರಿಕೊಳ್ಳುತ್ತಿದ್ದ ಅವರ ಸ್ವಾತಂತ್ರ್ಯವನ್ನು ನಾವು ಕಿತ್ತುಕೊಂಡಿದ್ದಕ್ಕೆ ಸಿಡಿಮಿಡಿಯಿತ್ತು. ಅವರ ಮನವಿ ಸಮಜಾಯಿಷಿಗಳನ್ನು ನಾವು ಲೆಕ್ಕಕ್ಕೇ ತೆಗೆದುಕೊಳ್ಳದೆ ಆಲ್ಕೋಮೀಟರೆಂಬ ಚಾಡಿಕೋರ ಯಂತ್ರವು ತೋರುವ ರೀಡಿಂಗುಗಳನ್ನೇ ನೆಚ್ಚಿಕೊಂಡು ತಮ್ಮ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆಂದು ಅವರು ಭಾವಿಸಿದ್ದುದೇ ಇದಕ್ಕೆ ಕಾರಣ. ಇಷ್ಟು ದಿನ ತಮ್ಮ ಹಾಗೂ ಪೊಲೀಸರ ನಡುವೆ ಇದ್ದ ಒಂದು ಸಾಮರಸ್ಯವನ್ನು ಈ ನಿರ್ಜೀವ ಯಂತ್ರವು ತನ್ನ ರೀಡಿಂಗುಗಳಿಂದ ಹಾಳುಗೆಡವಿದ್ದು ಅದೇನಾದರೂ ತಮ್ಮ ಕೈಗೆ ಸಿಕ್ಕಿದ್ದೇ ಆದಲ್ಲಿ ಪುಡಿಗಟ್ಟುವುದು ಮಾತ್ರವಲ್ಲದೆ ಅದನ್ನು ಭೂಮಿಯೊಳಗೆ ಹುಗಿದು ಸಮಾಧಿ ಮಾಡಲೂ ಅವರು ಸಿದ್ಧವಿದ್ದರು. ಆದರೆ ಅದು ಸಾಧ್ಯವಿಲ್ಲದ ಕಾರಣ ಕನಿಷ್ಠ ಆ ಯಂತ್ರವನ್ನು ದಾರಿ ತಪ್ಪಿಸುವುದಾದರೂ ಹೇಗೆ? ಎಂಬ ಬಗ್ಗೆ ವೈನ್‌ಶಾಪುಗಳಲ್ಲಿ ಗಹನವಾದ ಚರ್ಚೆಗಳಾಗುತ್ತಿದ್ದವು. ಅವುಗಳನ್ನೇನಾದರೂ ಕದಿಯುವುದು ಸಾಧ್ಯವಿದೆಯೇ? ಎನ್ನುವವರೆಗೂ ಕೆಲವರು ಯೋಚಿಸುತ್ತಿದ್ದರೆಂದರೆ ಅವು ಹುಟ್ಟುಹಾಕಿದ ಕಿರುಕುಳವನ್ನು ನೀವೇ ಊಹಿಸಿಕೊಳ್ಳಿ.

ಹೀಗೆ ತಮ್ಮ ಬಗ್ಗೆ ಇಲ್ಲದ ಸಲ್ಲದ ರೀಡಿಂಗುಗಳನ್ನು ತೋರಿಸಿ ಇದುವರೆಗೂ ತಾವು ಮೇಂಟೇನು ಮಾಡಿಕೊಂಡು ಬಂದ ಇಮೇಜುಗಳನ್ನು ದೂಳೀಪಟ ಮಾಡುತ್ತಿರುವ ಆಲ್ಕೋಮೀಟರುಗಳೆಂಬ ಈ ಯಃಕಶ್ಚಿತ್ ಮಷೀನುಗಳನ್ನು ಹೇಗಾದರೂ ಬಗ್ಗುಬಡಿಯಲೇಬೇಕೆಂದು ಅವರು ಆಲೋಚಿಸಿದ್ದರಲ್ಲಿ ಯಾವ ಅಚ್ಚರಿಯೂ ಇರಲಿಲ್ಲ. ಯಾಕೆಂದರೆ ಇದು ಅವರ ಮಾನ ಮರ್ಯಾದೆ ಪ್ರಶ್ನೆಯಾಗಿತ್ತು. ಯಾರಾದರೂ ನಿಲ್ಲಿಸಿ ನಿನ್ನ ಗಾಡಿ ಎಲ್ಲಿ ಹೋಯಿತು ಮಾರಾಯಾ... ಪೊಲೀಸರು ಎಳೆದುಕೊಂಡು ಹೋಗಿ ಠಾಣೆಯಲ್ಲಿ ಕಟ್ಟಿಹಾಕಿಕೊಂಡಿರುವರೇನು? ದಂಡ ಕಟ್ಟಲಾಗದ ಸ್ಥಿತಿಯಲ್ಲಿರುವ ನೀನು ಅದಕ್ಕಾಗಿ ಈ ನಡೆದುಕೊಂಡು ಓಡಾಡುವ ನಟರಾಜ ಸರ್ವೀಸನ್ನು ಆರಂಭಿಸಿರುವಿಯೇನು ಎಂದು ಕೇಳಿದರೆ ಏನುತ್ತರಿಸಿಯಾನು? ದಿನವೂ ಎದುರುಗೊಳ್ಳುವ ತನ್ನ ಕುಡುಕ ಮಿತ್ರವೃಂದಕ್ಕೆ ಹೇಗಾದರೂ ಮುಖ ತೋರಿಸಿಯಾನು? ಗೆಳೆಯಾ... ಸರ್ಕಲುಗಳಲ್ಲಿ ಪೊಲೀಸರು ಆರಂಭಿಸಿರುವ ಡ್ರಿಂಕ್ ಅಂಡ್ ಡ್ರೈವು ತಪಾಸಣೆಗೆ ಕುಶಾಗ್ರಮತಿಯಾದ ನೀನೂ ಬಲಿಪಶುವಾದೆಯೇನು ಎಂದು ಅವರು ಆಡಿಕೊಂಡರೆ ತನ್ನ ಮೀಸೆಗೆ ಮಣ್ಣು ಹತ್ತಿದಂತೆಯೇ ಅಲ್ಲವೇ?

ಅದಕ್ಕಾಗಿಯೇ ವೈನುಶಾಪುಗಳಲ್ಲಿ ತಮ್ಮ ತಮ್ಮ ಕಲಾಪಗಳನ್ನು ಮುಗಿಸಿಕೊಂಡ ನಂತರ ಪೊಲೀಸರ ಕಣ್ತಪ್ಪಿಸಿ ಹೇಗೆ ಸುರಕ್ಷಿತವಾಗಿ ಮನೆಯನ್ನು ಸೇರಿಕೊಳ್ಳಬಹುದು ಎಂಬ ಬಗ್ಗೆ ರೀಸರ್ಚುಗಳು ಆರಂಭವಾದವು. ಸಾಧ್ಯವಿದ್ದಲ್ಲಿ ತಮ್ಮೊಳಗಿನ ಸಕಲ ಕಲಾ ನೈಪುಣ್ಯತೆಯನ್ನು ಬಳಸಿ ಶಕ್ತ್ಯಾನುಸಾರ ಅಸಹಕಾರ ತೋರಬೇಕೆಂಬುದರ ಬಗ್ಗೆಯೂ ಗುಪ್ತವಾದ ಒಡಂಬಡಿಕೆಗಳು ನಡೆದವು. ತಮ್ಮ ಅಧ್ಯಕ್ಷರಾದ ಪಾಂಡುವಿನ ವಶೀಲಿಬಾಜಿಯು ಅಷ್ಟೋ ಇಷ್ಟೋ ನಡೆಯುತ್ತಿದ್ದರಿಂದಾಗಿ ಇಷ್ಟು ದಿನ ನಾವೆಲ್ಲಾ ಕೊಂಚ ನೆಮ್ಮದಿಯಿಂದಿದ್ದೆವು. ಇನ್ನು ಆ ಆಶಾಭಾವನೆಯೂ ಇಲ್ಲವಾದ್ದರಿಂದ ತಮ್ಮ ತಮ್ಮ ದಾರಿಗಳನ್ನು ತಾವೇ ಹುಡುಕಿಕೊಳ್ಳಬೇಕೆಂಬ ನಿರ್ಣಯವನ್ನು ಕುಡುಕ ಮಹಾ ಸಂಘವು ಕೈಗೊಂಡಿತು.